CW 4 PW 3

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ**

**ಸಿ.ಸಿ. ನಂ. 1482/2025**

| | | |
|---|---|---|
| ಸಾಕ್ಷಿದಾರರ ಹೆಸರು | – | ದೇವು |
| ತಂದೆಯ ಹೆಸರು | – | ಈರು ಗೌಡ |
| ವಯಸ್ಸು | – | 51 ವರ್ಷ |
| ಉದ್ಯೋಗ | – | ಮಿರ್ಜಾನ ಪಂಚಾಯತಿಯಲ್ಲಿ ದ್ವಿದ.ಸ |
| ವಾಸ್ತವ್ಯ | – | ಹರ್ಕಡೆ, ಕುಮಟಾ, |

(ಇಂದು ದಿನಾಂಕ 24-08-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ –ಮಾನ್ಯ ಸ.ಸ.ಅ. ರವರಿಂದ**

ದಿಃ 21-04-2023 ರಂದು ಪೊಲೀಸರು ನಮ್ಮ ಪಂಚಾಯತಿಗೆ ಬಂದಿದ್ದು ಸದರಿ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ನನ್ನನ್ನು ಹಾಗೂ ಚಾಸಾ.5 ರವರನ್ನು ಪೊಲೀಸರ ಜೊತೆಗೆ ಹೋಗಲು ತಿಳಿಸಿರುತ್ತಾರೆ. ಸದರಿ ಸಂದರ್ಭದಲ್ಲಿ ನಾನು ಪೊಲೀಸರ ಜೊತೆಗೆ ನಾಗೂರು ಗ್ರಾಮದ ವನಕೇರಿಗೆ ಹೋಗಿದ್ದು ಸುಮಾರು ಅಲ್ಲಿ ನಮಗೆ ಪೊಲೀಸರು ತೆಂಗಿನ ಮರ ಹಾಗೂ ಬೆಟ್ಟವನ್ನು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಬಂದೂಕಿಗೆ ಸಂಬಂಧಿಸಿದ ಘಟನೆ ನಡೆದಿದ್ದು ನೀವು ಬರಬೇಕು ಎಂದು ಹೇಳಿರುತ್ತಾರೆ. ಪಂಚನಾಮೆಯ ಸಂದರ್ಭದಲ್ಲಿ ರಕ್ತ ತಾಗಿದ ಕೆಂಪು ಶರ್ಟನ್ನು ಹಾಗೂ ಬ್ಯಾಟರಿಯನ್ನು ವಶಪಡಿಸಿಕೊಂಡಿರುತ್ತಾರೆ. ಈ ಸಂದರ್ಭದಲ್ಲಿ ಪೊಲೀಸರ ಜೊತೆ 2 ನೆ ಆರೊಪಿತನಿದ್ದನು. ಸಾಕ್ಷಿಯು ನ್ಯಾಯಾಲಯದ ಮಂದೆ ಇರಮ 2 ನೇ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ಘಟನಾ ಸ್ಥಳ ಹಾಗೂ ಕೆಂಪು ಬಣ್ಣದ ಬಟ್ಟೆಯನ್ನು 2 ನೇ ಆರೋಪಿತನು ತೋರಿಸಿರುತ್ತಾನೆ.

ನಂತರ 2 ನೇ ಆರೋಪಿತನು ನಮ್ಮನ್ನು 1 ನೇ ಆರೊಪಿತನ ಮನೆಗೆ ಹೋಗಿರುತ್ತಾನೆ. 1 ನೇ ಆರೋಪಿತನ ಮನೆಯ ಕೊಟ್ಟಿಗೆಯಲ್ಲಿದ್ದ ಬಂದೂಕನ್ನು ತೋರಿಸಿರುತ್ತಾರೆ. ಸದರಿ ಸಂದರ್ಭದಲ್ಲಿ ಪೊಲೀಸರು ಎಲ್ಲ ವಿಷಯಗಳು ಕುರಿತು ಪಂಚನಾಮೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಒಂದು ನಕಾಶೆಯನ್ನು ಹಾಗೂ ಭವಚಿತ್ರವನ್ನು ತೆಗೆದಿರತ್ತೂರೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಅದನ್ನು ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 13 ಭಾವಚಿತ್ರಗಳನ್ನು ತೋರಿಸಲಾಗಿ ಅದನ್ನು ನಿಪಿ.7 ರಿಂದ 19 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬಂದೂಕನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾಲು.1 ಎಂದು ಗುರುತಿಸಲಾಯಿತು. ಸಾಕ್ಷಿಯು ಕೆಂಪು ಬಣ್ಣದ ಶರ್ಟನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾಲು.2 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬ್ಯಾಟರಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾಲು.3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು –ಮಾನ್ಯ ಸ.ಸ.ಅ. ರವರಿಂದ**

ಮು.ಮಾಲು.3 ದನದ ಕೊಟ್ಟಿಗೆಯಲ್ಲಿತ್ತು ಎಂದರೆ ಸರಿ. ಮು.ಮಾಲು.1 ಹಾಗೂ 3 ನ್ನು ಯಾರಿಗೂ ತಿಳಿಯದಂತೆ ಹುಲ್ಲಿಯ ರಾತಿಯಲ್ಲಿ ಇಟ್ಟಿದ್ದೆವು ಎಂದು 2 ನೇ ಆರೋಪಿತನು ತಿಳಿಸಿರುತ್ತಾನೆ ಎಂದರೆ ಸರಿ.

**ಪಾಟೀ ಸವಾಲು – ಆರೋಪಿ ಪರ ಶ್ರೀ ಜಿ.ಸಿ.ಎನ್. ವಕೀಲರಿಂದ**

ನಾನು ಸರ್ಕಾರಿ ನೌಕರ ಎಂದರೆ ಸರಿ. ಅದ್ದರಿಂದ ನಾನು ಪೊಲೀಸರು ಹೇಳಿದತೆ ಕೇಳಬೇಕು ಎಂದರೆ ಸರಿ. ಅದೇ ರೀತಿಯಾಗಿ ಪೊಲೀಸರು ಹೇಳಿಕೊಟ್ಟಂತೆ ಹೇಳಬೇಕು ಎಂದರೆ ಸರಿಯಲ್ಲ. ನಾನು ದಿಃ 21-04-2023 ರಂದು ಪೊಲೀಸ್ ಠಾಣೆಯಿಂದ ಹೋಗಿರುವುದಿಲ್ಲ. ನಾನು ಪೊಲೀಸ ಠಾಣೆಗೆ ಸದರಿ ದಿನಾಂಕದಂದು ಬಂದಿರುವುದಿಲ್ಲ ಎಂದರೆ ಸರಿ. ಪೊಲೀಸರು ಜೀಪಿನಲ್ಲಿ ನಮ್ಮ ಪಂಚಾಯತ ಕಚೇರಿಗೆ ಬಂದಿರುತ್ತಾರೆ. ನಮ್ಮ ಗ್ರಾಮ ಪಂಚಾಯತಿಗೆ ಎರಡು ಜೀಪ ಬಂದಿದ್ದು ಅದರಲ್ಲಿ 5 ಇದ್ದರು. ಸದರಿ ಜೀಪನಲ್ಲಿ ಪೊಲೀಸರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಮು.ಮಾಲು.2 ನಿರ್ದಿಷ್ಟವಾಗಿ ಎಲ್ಲಿ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಬಂದೂಕು ಇದ್ದ ಸ್ಥಳವು ಯಾರಿಗೆ ಸೇರಿದ್ದು ಎಂದು ನನಗೆ ಮಿರ್ಜಾನದಿಂದ ಪೊಲೀಸರ ಜೀಪಿನಲ್ಲಿ ಹೋಗಿದ್ದು ಪೊಲೀಸರು ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ. ಸ್ಥಳದಲ್ಲಿ ನಕಾಶೆಯನ್ನು ಬಿಡಿಸಿದ ಪೊಲೀಸರ ಹೆಸರು ನನಗೆ ನಿರ್ದಿಷ್ಟವಾಗಿ ಗೊತ್ತಿಲ್ಲ. ನಾನು ಸರ್ಕಾರಿ ನೌಕರನಾಗಿದ್ದು ಪೊಲೀಸರಿಗೆ ಹೆದರಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಘಟನಾ ಸ್ಥಳದಲ್ಲಿ ತೆಗೆಯಲಿಲ್ಲ ಎಂದರೆ ಸರಿಯಲ್ಲ. ಮು.ಮಾಲು.1 ಎಲ್ಲರ ಮನೆಯಲ್ಲಿ ಇರುತ್ತದೆ ಎಂದರೆ ಸಾಕ್ಷಿ ಈ ಬಗೆ ನಗೆ ಗೊತ್ತಿಲ್ಲ ಎಂದು

CW 4 PW 3

ನುಡಿಯುತ್ತಾರೆ. ಮು.ಮಾಲು.1 ನ್ನು 2 ನೇ ಆರೋಪಿತನು ತೋರಿಸಿರುತ್ತಾರೆ. ಸದರಿ ಮು.ಮಾಲು.1 ನ್ನು ಫೈರ್ ಮಾಡಿ ತೋರಿಸಿರುವುದಿಲ್ಲ. ನಾನು ಮು.ಮಾಲು.1 ನ್ನು 2 ನೇ ಆರೋಪಿತನು ತೋರಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಪ್ರ.ದ.ನ್ಯಾದಂ. ಕುಮಟಾ